ಅವನಿಗೆ. ''ಸಲೀಂ, ಮೇಮ್‌ಸಾಬ್...'' ಎಂದಿದ್ದ.

''ಅನಾರ್ಕಲಿ ಏನಾದರೂ ಸಿಕ್ಕಿದ್ದಾಳಾ...'' ಕೇಳಿದ್ದಳು ನಕ್ಕು.

''ಯಾವ ಅನಾರ್ಕಲಿ ಮೇಮ್‌ಸಾಬ್...'' ಕೇಳಿದ್ದ ಸಲೀಂ ಅಮಾಯಕನಂತೆ. ''ಅರೆ, ಗುಲ್ಡುಖಾನ್, ಸಲೀಂ ಅನಾರ್ಕಲಿ ಪ್ಯಾರ್ ಕಹಾನಿ ಗೊತ್ತಿಲ್ವಾ ನಿಂಗೆ? ಸಲೀಂ ಅಂತ ಹೆಸರಿಟ್ಟುಕೊಂಡು...'' ತಮಾಷೆಯ ಧ್ವನಿಯೊಂದಿಗೆ ನಗು ಅಲೆ ಅಲೆಯಾಗಿ ಹರಡಿಕೊಂಡಿತ್ತು. ಅವಳ ನಗುವಿನ ಅಲೆಯಲ್ಲಿ ಮುಳುಗಿ ಎದ್ದ ಅವನು,

''ಗೊತ್ತಿಲ್ಲ ಮೇಮ್‌ಸಾಬ್. ಗರಿಬ್ ಆದ್ಮಿ, ನಾನು ಓದಿದ್ದು ಕಮ್ಮಿ...'' ನಿಜವನ್ನು ಮುಜುಗರ ಪಡದೆ ಹೇಳಿದ್ದ.

''ಹೋಗಲಿ ಬಿಡು, ನಾನೀಗ ನೀನು ಕೊಟ್ಟ ಅತ್ತರನ್ನೇ ಹಾಕಿದ್ದೇನೆ. ಯಾವ್ ಹೂವಿನ ಅತ್ತರು ಹೇಳಬಲ್ಲೆಯ...'' ಮತ್ತೆ ಪ್ರಶ್ನೆ.

''ಸಂಪಿಗೆಯ ಅತ್ತರು...'' ಥಟ್ಟನೆ ಉತ್ತರಿಸಿದ್ದ .

''ನೀನು ನಿಜಕ್ಕೂ ಒಳ್ಳೆಯ ಅತ್ತರು ವ್ಯಾಪಾರಿ...'' ತಾರಿಫು ಮಾಡಿದ್ದಳು. ''ನಿಮ್ಮ ಹೆಸರು ಚಾಂದ್ ಬಾನು ಅಂತೆ. ಸಿನಿಮಾದಲ್ಲಿ ಹೀರೋಯಿನ್ ಪಾತ್ರ ಮಾಡ್ತಿದ್ದೀರಂತೆ...'' ಕೇಳಿದ್ದ ಧೈರ್ಯ ಮಾಡಿ. ''ಯಾರು ಹೇಳಿದ್ದು...'' ಕೇಳಿದ್ದಳವಳು.

''ನೀವು ಅತ್ತರು ಕೊಳ್ಳಲು ಬಂದಾಗ ಇಲ್ಲಿ ಎಲ್ಲರೂ ಮಾತನಾಡಿಕೊಂಡರು...'' ಸತ್ಯ ಹೇಳಿದ್ದನವನು.

''ಅದಕ್ಕೇ ಈಗ ಬುರ್ಖಾ ಹಾಕಿಕೊಂಡು ಬಂದದ್ದು. ನಾಳಿದ್ದು ಏನು ಗೊತ್ತಾ...'' ಕೇಳಿದ್ದಳು.

''ಗೊತ್ತಿಲ್ಲ ಮೇಮ್‌ಸಾಬ್...'' ಮುಗ್ಧವಾಗಿಯೇ ಹೇಳಿದ್ದ ಅಮಾಯಕ ಅತ್ತರು ವ್ಯಾಪಾರಿ.

''ಫುಲ್ ಮೂನ್ ಡೇ ... ಅಂದರೆ ಹುಣ್ಣಿಮೆ...''

''ಓಹ್, ಹುಣ್ಣಿಮೆಯ ದಿನ ಗೋಲ್ಕೊಂಡ ಕೋಟೆ ನೋಡಲು ತುಂಬಾ ಚಂದ ಮೇಮ್‌ಸಾಬ್...'' ಅವಳ ಮಾತುಗಳನ್ನು ಮಧ್ಯದಲ್ಲಿ ತುಂಡರಿಸಿ ಹೇಳಿದ್ದ.

''ನಾಳಿದ್ದು ಸಂಜೆ ಆರೂವರೆ ಗಂಟೆಗೆ ಕೋಟೆಯ ಮೇಲಿನ ಅಸೆಂಬ್ಲಿ ಹತ್ತಿರ, ಅದೇ ಹವಾಮಹಲ್ ಹತ್ತಿರ ಬಾ. ನಾನು ಬರ್ತೀನಿ. ಆಂ! ಮತ್ತೆ ಯಾರಿಗೂ ಹೇಳಬೇಡ...'' ಎಂದು ಹೇಳಿ ಕಾರು ಹತ್ತಿ ಹೊರಟು ಹೋಗಿದ್ದಳು. ಸಲೀಂ ದಿಗ್ಮೂಢನಾಗಿ ಕಾರು ಹೋದ ದಾರಿಯನ್ನು ನೋಡುತ್ತಾ ನಿಂತಿದ್ದ.

ಅಂದು ಹುಣ್ಣಿಮೆಯೆಂಬುದನ್ನು ತನ್ನ ತಾಯಿಯ ಬಳಿಯೂ ಕೇಳಿ ಖಾತ್ರಿ ಮಾಡಿಕೊಂಡಿದ್ದ ಸಲೀಮನ ಎದೆಯಲ್ಲಿ ಹೇಳಿಕೊಳ್ಳಲಾರದಂಥ ಸಂಭ್ರಮ, ತಳಮಳ. ಅವಳು ಹೇಳಿದಂತೆ ಅವನು ಆರೂವರೆ ಗಂಟೆಗೆ ಸರಿಯಾಗಿ ಗೋಲ್ಕೊಂಡ ಕೋಟೆಯ ತುದಿಯಲ್ಲಿರುವ ಅಸೆಂಬ್ಲಿ ಕಟ್ಟಡದ ಮುಂದಿನ ಆವರಣದಲ್ಲಿ ನಿಂತಿದ್ದ. ಮತ್ತು ಈ ವಿಷಯವನ್ನು ಯಾರ ಬಳಿಯೂ ಬಾಯಿ ಬಿಟ್ಟಿರಲಿಲ್ಲ. ಮಬ್ಬುಗತ್ತಲು ಹುಣ್ಣಿಮೆ ಚಂದ್ರನ ಬೆಳಕಿನೊಂದಿಗೆ ಮಿಳಿತಗೊಳ್ಳತೊಡಗಿತ್ತು. ಬುರ್ಖಾ ತೊಟ್ಟ ಆಕೃತಿಯೊಂದು ಅವನ ಬಳಿ ಬಂದು ನಿಂತು ಒಮ್ಮೆ ಬುರ್ಖಾ ಎತ್ತಿ ಮುಖ ತೋರಿ ಮತ್ತೆ ಬುರ್ಖಾ ಮುಚ್ಚಿಕೊಂಡಿತ್ತು. ಅರೆ, ಅವಳೇ ತನ್ನ ಅತ್ತರು ಖರೀದಿಸಿದ್ದ ಚಾಂದ್ ಬಾನು. ಅವಳು ಅವನ ಕೈ ಹಿಡಿದು ಕೋಟೆಯನ್ನು ಇಳಿಯತೊಡಗಿದಳು. ಅವಳ ಸ್ಪರ್ಶದಿಂದ ಅವನು ರೋಮಾಂಚನಗೊಂಡು ಮಂತ್ರಮುಗ್ಧನಾಗಿ ಅವಳೊಂದಿಗೆ ಇಳಿಯತೊಡಗಿದ. ಹದಿನೈದು ಮೆಟ್ಟಿಲು ಇಳಿದಿರಬೇಕು, ಅವಳು ಬುರ್ಖಾ ಎತ್ತಿ ಅವನ ಕೆನ್ನೆಗೆ ತನ್ನ ತುಟಿಗಳನ್ನೊತ್ತಿ ದೀರ್ಘವಾಗಿ ಚುಂಬಿಸಿದ್ದಳು. ಅವನು ದಿಗ್ಭ್ರಾಂತನಾಗಿದ್ದ. ತನ್ನ ಬದುಕಿನಲ್ಲಿ ಇಂಥದ್ದೊಂದು ಸಂಗತಿ ಸಂಭವಿಸುತ್ತದೆಂದು ಅವನೆಂದೂ ಊಹಿಸಿರಲಿಲ್ಲ. ''ಸಲೀಂ ನನ್ನನ್ನು ಹೊತ್ತುಕೊಂಡು ಕೆಳಗಿನವರೆಗೂ ಇಳಿಯಬಲ್ಲೆಯ...'' ಎಂದು